ಉಪಕೇಂದ್ರಗಳನ್ನು ಮಾಡಬೇಕು ಎಂದು ನಿಮ್ಮ ಪ್ಲಾನ್‌ನಲ್ಲಿ ಬಡ್ಜೆಟ್‌ನಲ್ಲಿ ಇದೆ? ಈ ವರ್ಷ ಯಾವ ಸಬ್‌ಸ್ಟೇಷನ್ ಕೆಲಸವನ್ನು ಪ್ರಾರಂಭ ಮಾಡುತ್ತೀರಿ?

10.50 ಎ.ಎಂ

ತುಮಕೂರು ಜಿಲ್ಲೆ ಮಟ್ಟಕ್ಕೆ ನಾವು ಕೇಳಬೇಕಾದರೆ ಅದಂತೂ ನಿಮ್ಮಿಂದ ಆಗಲಿಲ್ಲ. ಯಾವುದಿದೆ ಎನ್ನುವುದಾದರೆ ನಿಮ್ಮ ಹತ್ತಿರ ಇರಬೇಕಲ್ಲಾ ದಯಮಾಡಿ ಅದನ್ನು ಹೇಳಿ.

ಶ್ರೀ ಶರಣಬಸಪ್ಪ ದರ್ಶನಾಪುರ್: ಯಾವುದು ಇದೆ ಎನ್ನುವುದನ್ನು ಪಟ್ಟಿ ತರಿಸಿ ಕೊಡುತ್ತೇನೆ. ಅಲ್ಲಿ ಈಗಾಗಲೇ ಇದೆ. ಸಂಬಂಧಪಟ್ಟಂಥ ಮಾನ್ಯ ಸದಸ್ಯರು ಏನು ಪ್ರಶ್ನೆ ಕೇಳಿದ್ದಾರೆ, ಈ ಪ್ರಶ್ನೆಯ ಉತ್ತರಕ್ಕೆ ಮಾನ್ಯ ಸದಸ್ಯರ ತೃಪ್ತಿ ಇದೆ. ಸ್ಪಷ್ಟವಾಗಿ ಹೇಳಿದ್ದೇನೆ, ಈ ವರ್ಷದ ಬಜೆಟ್‌ನಲ್ಲಿ ಇದಕ್ಕೆ ಪ್ರಾವಿಷನ್ ಮಾಡಿಲ್ಲ, ಮುಂದಿನ ವರ್ಷದ ಬಜೆಟ್‌ನಲ್ಲಿ ಇದಕ್ಕೆ ಪ್ರಾವಿಷನ್ ಮಾಡುವ ವ್ಯವಸ್ಥೆ ಮಾಡುತ್ತೇವೆ ಎಂದೂ ಕೂಡ ಹೇಳಿದ್ದೇನೆ. ಇದಕ್ಕಿಂತ ಸ್ಪಷ್ಟ ಉತ್ತರ ಮತ್ಯಾವುದು ಕೊಡುವುದು? ಕೆಂಪನಹಳ್ಳಿಯದ್ದು ಕೇಳಿದರು. ಅದರ ಪಕ್ಕದಲ್ಲಿ ಅಂಚೆ ಪಾಳ್ಯ ಇರುವುದರಿಂದ ಈ ಒಂದು ಕಾಮಗಾರಿಯನ್ನು ಅಲ್ಲಿ ತೆಗೆದುಕೊಳ್ಳುವುದಿಲ್ಲ. ಅದರ ಬದಲು ಅಲ್ಲಿ ಒಂದು 11 ಕೆ.ವಿ.ಎ.ಎಕ್ಸ್‌ಪ್ರೆಸ್ ಲೈನನ್ನು ಮಾಡುವುದರ ಮೂಲಕ ಆ ಭಾಗದಲ್ಲಿ ಬರುವ ಹಳ್ಳಿಗಳಿಗೆ, ಮಾನ್ಯ ಸದಸ್ಯರು ಕಾಳಜಿ ವ್ಯಕ್ತಪಡಿಸಿರುವಂತೆ, ಇದರಿಂದ ಅಲ್ಲಿ ಬರತಕ್ಕಂಥ ಹಳ್ಳಿಗಳಿಗೆ ತೊಂದರೆ ನಿವಾರಣೆಯಾಗುತ್ತದೆ. ಇಷ್ಟಾದರೂ ಕೂಡ ತೊಂದರೆ ನಿವಾರಣೆ ಆಗದಿದ್ದಲ್ಲಿ ಅದರ ಬಗ್ಗೆ ನಾವು ಬೇರೆ ಒಂದು ಸಬ್ ಸ್ಟೇಷನ್ ಕಾಮಗಾರಿಯನ್ನು ತೆಗೆದುಕೊಳ್ಳುವಂತೆ ನಾವು ಸಂಬಂಧಪಟ್ಟ ಇಲಾಖೆಯವರಿಗೆ ತಿಳಿಸುತ್ತೇವೆ.

ಶ್ರೀ ಎಸ್.ಪಿ.ಮುದ್ದಹನುಮೇಗೌಡ: ಮಾನ್ಯ ಸಭಾಧ್ಯಕ್ಷರೇ, ಒಂದೇ ಒಂದು ವಿಷಯ. ಮುಂದಿನ ವರ್ಷದಲ್ಲಿ ಇದನ್ನು ಸೇರಿಸುತ್ತೇವೆ ಎನ್ನುವ ಮಾತನ್ನು ಹೇಳಿದಿರಿ. ಖಚಿತವಾಗಿ ಮುಂದಿನ ವರ್ಷದಲ್ಲಾದರೂ ಇದನ್ನು ಸೇರಿಸಿ ಮಾಡತಕ್ಕಂಥಾದ್ದರ ಬಗ್ಗೆ ತಾವು ಆಶ್ವಾಸನೆಯನ್ನು ಕೊಡಬೇಕು. ಎರಡನೆಯದಾಗಿ, ನಿಮ್ಮ ಆರ್ಥಿಕ ಪರಿಸ್ಥಿತಿಯ ಬಗ್ಗೆ ಹೇಳಿದಿರಿ. ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಆರ್ಥಿಕ ಪರಿಸ್ಥಿತಿ ಯಾವತ್ತಿಗೂ ಕೂಡ ಅಷ್ಟು ಉತ್ತಮವಾಗಿಲ್ಲ. ಆದರೆ ಇರತಕ್ಕಂಥ ವಿದ್ಯುತ್ತಿನ ಸಮರ್ಪಕ ಸರಬರಾಜು ಮಾಡಬೇಕಾದರೆ ನೀವು ಅದಕ್ಕೂ ಆರ್ಥಿಕ ಪರಿಸ್ಥಿತಿಗೂ ಕನೆಕ್ಟ್ ಮಾಡಲು ಆಗುವುದಿಲ್ಲ. ಆದ್ದರಿಂದ ದಯಮಾಡಿ ನೀವು ಆ ಒಂದು ಕಾರಣ ನೀಡದೆ ಹೆಚ್ಚಾಗಿ ಉಪಕೇಂದ್ರಗಳನ್ನು ಮಾಡತಕ್ಕಂಥ ಕೆಲಸವನ್ನು ತಾವು ಮಂಡಳಿಯವರು ಮಾಡಬೇಕು.

ವಿಷಯ: ವಿಕ್ಟೋರಿಯ/ವಾಣಿವಿಲಾಸ್ ಆಸ್ಪತ್ರೆಗಳ ಪ್ರವೇಶದ್ವಾರದಿಂದ ಬಸ್ ನಿಲ್ದಾಣದ ಸ್ಥಳಾಂತರ.

ಶ್ರೀ ಎನ್.ರಾಜಣ್ಣ (ಭಾರತೀನಗರ): ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಂಬುಲೆನ್ಸ್‌ಗಳು ಮತ್ತು ಅಪಘಾತಕ್ಕೊಳಗಾದ ಗಾಯಾಳುಗಳನ್ನು ವಿಕ್ಟೋರಿಯ ಆಸ್ಪತ್ರೆ, ವಾಣಿವಿಲಾಸ ಆಸ್ಪತ್ರೆ, ಜಯದೇವ ಹೃದ್ರೋಗ ಆಸ್ಪತ್ರೆಗೆ ಕರೆದೊಯ್ಯಲು ಆ ಆಸ್ಪತ್ರೆಗಳ ಸುತ್ತಲು ಇರುವ ಅತಿ ಸಂಚಾರ ಒತ್ತಡದಿಂದಾಗಿ ಸಕಾಲದಲ್ಲಿ ಹೋಗಲು ಸಾಧ್ಯವಾಗುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಆಸ್ಪತ್ರೆಯ ಮುಂಭಾಗದಿಂದ ಬಸ್ ನಿಲ್ದಾಣವನ್ನು ಬೇರೆ ಕಡೆಗೆ ವರ್ಗಾಯಿಸುವುದಕ್ಕೆ ಸರ್ಕಾರವು ನಿರ್ಧರಿಸುವುದೇ?

ಶ್ರೀ ಆರ್.ರೋಷನ್‌ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು):

ಅ) ಹೌದು.

ಆ) ಇಲ್ಲ. ಆದಾಗ್ಯೂ ಈ ರಸ್ತೆಯ ಪ್ರಾಮುಖ್ಯತೆಯನ್ನು ಹಾಗೂ ಇಲ್ಲಿನ ಅತೀ ಸಂಚಾರವನ್ನು ಮನಗಂಡು ಈ ರಸ್ತೆಯನ್ನು ಏಕಮುಖ. ರಸ್ತೆಯನ್ನಾಗಿ ಮಾಡಲಾಗಿದೆ. ವಾಹನಗಳನ್ನು ಮೆಡಿಕಲ್ ಕಾಲೇಜ್ ವೃತ್ತದಿಂದ ಸಿಟಿ ಮಾರ್ಕೆಟ್ ಕಡೆಗೆ ಮಾತ್ರ ಹೋಗುವಂತೆ ವ್ಯವಸ್ಥೆ ಮಾಡಲಾಗಿದೆ. ಇದರಿಂದಾಗಿ ಸಂಚಾರದ ಒತ್ತಡ ಕಡಿಮೆ ಮಾಡಿದಂತಾಗಿದೆ.

ಈ ಪ್ರದೇಶದಲ್ಲಿ ಪಾರ್ಕಿಂಗನ್ನು ನಿಯಂತ್ರಿಸಲು ಕ್ರಮಗಳನ್ನು ಕೈಗೊಳ್ಳಲಾಗಿದೆ. ವಾಹನಗಳ ನಿಲುಗಡೆಯನ್ನು ಆಸ್ಪತ್ರೆಯ ಕಾಂಪೌಂಡ್ ಪಕ್ಕದಲ್ಲಿಯೇ ಮಾಡುವಂತೆ ಸೂಚಿಸಲಾಗಿದೆ. ಇದನ್ನು ಹೊರತುಪಡಿಸಿ ಬೇರೆ ಭಾಗವನ್ನು ಸುಗಮ ಸಂಚಾರಕ್ಕಾಗಿ ಮೀಸಲಿರಿಸಿದೆ. ಈ ಪ್ರದೇಶದಲ್ಲಿ ಸಂಚಾರ ಒತ್ತಡವನ್ನು ನಿಯಂತ್ರಿಸಲು ಸಿಬ್ಬಂದಿಯವರನ್ನು ನೇಮಿಸಲಾಗುತ್ತಿದೆ. ಅಲ್ಲದೇ ಆಂಬುಲೆನ್ಸ್‌ಗಳನ್ನು ಆಸ್ಪತ್ರೆಯ ಒಳಗಡೆಗೆ ಹೋಗುವುದಕ್ಕೆ ಅತಿ ಹೆಚ್ಚಿನ ಆದ್ಯತೆಯನ್ನು ನೀಡಲಾಗುತ್ತಿದೆ.

ಶ್ರೀ ಎನ್.ರಾಜಣ್ಣ: ಸನ್ಮಾನ್ಯ ಅಧ್ಯಕ್ಷರೇ, ಸಚಿವರು ಉತ್ತರದಲ್ಲಿ ಹೇಳುತ್ತಿದ್ದಾರೆ, ಆಸ್ಪತ್ರೆಯ ಮುಂಭಾಗದಿಂದ ಬಸ್ ನಿಲ್ದಾಣವನ್ನು ಬೇರೆ ಕಡೆಗೆ ವರ್ಗಾಯಿಸುವುದಕ್ಕೆ ಸರ್ಕಾರದ ನೀತಿ ಇಲ್ಲ ಎಂದು ಹೇಳುತ್ತಾರೆ. ಅದು ಇಲ್ಲ ಎಂದು ಹೇಳಿದ ಮೇಲೆ, ಅಲ್ಲಿ ಎಂಟ್ರನ್ಸ್ ಯಾವಾಗಲೂ ಬ್ಲಾಕ್ ಆಗಿರುತ್ತದೆ. ಬೆಂಗಳೂರು ಮೆಡಿಕಲ್ ಕಾಲೇಜಿನಿಂದ ಹಿಡಿದು ಸಿಟಿ ಮಾರ್ಕೆಟ್‌ವರೆಗೆ ಆ ರಸ್ತೆ ಕಂಪ್ಲೀಟ್ ಆಗಿ ವಾಹನಗಳ ಒತ್ತಡದಿಂದ ನರಳುತ್ತಿದೆ. ಹೀಗಾದರೆ ಆಂಬುಲೆನ್ಸ್ ಎಲ್ಲಿ ಎಂಟರ್ ಆಗುತ್ತವೆ? ವಿಕ್ಟೋರಿಯಾ ಆಸ್ಪತ್ರೆಗೆ ಹೋಗಬೇಕಾದರೆ ಅದೇ ಮೈನ್ ಗೇಟ್, ವಾಣಿ ವಿಲಾಸ್ ಆಸ್ಪತ್ರೆಗೆ

ಹೋಗಬೇಕಾದರೂ ಅದೇ ಮೈನ್ ಗೇಟ್, ಜಯದೇವ ಹೃದ್ರೋಗ ಆಸ್ಪತ್ರೆಗೆ ಹೋಗಬೇಕಾದರೂ ಅದೇ ಮೈನ್ ಗೇಟ್. ಈ ಮೂರು ಕೇಂದ್ರಗಳಿಗೂ, ಒಂದು ಅಪಘಾತ, ಎರಡನೆಯದು ಹೃದಯಾಪಘಾತ, ಮೂರನೆಯದು ಸಣ್ಣಪುಟ್ಟ ಮೆಟರ್ನಿಟಿ ಹೋಂಗಳಲ್ಲಿ ರಿಜೆಕ್ಟ್ ಆದಂಥ ಮಹಿಳೆಯನ್ನು ಅಲ್ಲಿಗೆ ತೆಗೆದುಕೊಂಡು ಬರಬೇಕಾದರೆ ಆಂಬುಲೆನ್ಸ್ ಅರ್ಧ ಗಂಟೆ, ಒಂದು ಗಂಟೆ ನಿಲ್ಲುವ ಪರಿಸ್ಥಿತಿಗೆ ಬಂದು ಆಂಬುಲೆನ್ಸ್‌ನಲ್ಲೇ ಡೆಲಿವರಿಯಾಗಿರುವಂಥ ಕೆಲವು ಕೇಸುಗಳ ಮಾಹಿತಿಗಳು ನನ್ನ ಹತ್ತಿರ ಇದೆ, ಎರಡನೆಯದು, ಹಾರ್ಟ್ ಅಟ್ಯಾಕ್ ಆಗಿ ಡೇಂಜರ್ ಆಗಿ ಆ ವ್ಯಕ್ತಿ ಆಂಬುಲೆನ್ಸ್‌ನಲ್ಲೇ ತೀರಿಹೋಗಿರುವುದೂ ಇದೆ. ಈ ಮೂರಕ್ಕೂ ನನಗೆ ಸೂಕ್ತವಾದಂಥ ಮತ್ತು ಸರಿಯಾದ ಉತ್ತರಬೇಕು.

ಶ್ರೀ ಆರ್.ರೋಷನ್‌ಬೇಗ್: ಮಾನ್ಯ ಸಭಾಧ್ಯಕ್ಷರೇ, ಆಸ್ಪತ್ರೆಯ ಹತ್ತಿರ ಕಂಜೆಷನ್ ಆಗಿದೆ ಎಂದು ಹೇಳಿರುವುದು ನಿಜ. ಆಂಬುಲೆನ್ಸ್ ಹೋಗಬೇಕಾದರೆ, ಆಂಬುಲೆನ್ಸ್‌ಗೆ ಸೈರನ್ ಇರುತ್ತದೆ, ಒನ್ ವೇಯಲ್ಲಿ ಕೂಡ ಆಂಬುಲೆನ್ಸ್ ಹೋಗಬಹುದು. ಎಲ್ಲಿ ರಷ್ ಇದ್ದರೂ ಸೈರನ್ ಇರುವುದರಿಂದ ಆಂಬುಲೆನ್ಸ್ ಹೋಗಬಹುದು. ಅವರು ಹೇಳುತ್ತಿರುವಂತೆ ಅಲ್ಲಿ ಏನಾಗಿದೆ ಎಂದರೆ, ಸುತ್ತಮುತ್ತ ಬಹಳ ಕನ್‌ಜೆಸ್ಟೆಡ್ ಆಗಿದೆ, ಒಂದು ಕಡೆ ಬಹಳ ಹಳೆಯ ಮಾರ್ಕೆಟ್ ಇದೆ. ಅಲ್ಲಿಗೆ ಅಗತ್ಯ ವಸ್ತುಗಳನ್ನೊಳಗೊಂಡ ಹೆವಿ ವೆಹಿಕಲ್ಸ್ ಬರುತ್ತಿರುತ್ತವೆ. ಆಮೇಲೆ ಅಲ್ಲಿ ಕಲಾಸಿಪಾಳ್ಯಂ ಎಂದು ಒಂದು ಬಸ್ ಸ್ಟ್ಯಾಂಡ್ ಇದೆ. ಆದ್ದರಿಂದ ಅದರ ಸುತ್ತಮುತ್ತ ಟ್ರಾಫಿಕ್ ಜಾಸ್ತಿಯಾಗಿದೆ. ಮಾನ್ಯ ರಾಜಣ್ಣನವರು ಕಲಾಸಿಪಾಳ್ಯಂ ಬಸ್‌ಸ್ಟ್ಯಾಂಡ್ ಅನ್ನು ಶಿಫ್ಟ್ ಮಾಡಿದರೆ, ನಾವು ಸುತ್ತಮುತ್ತ ಬರುವ ವೆಹಿಕಲ್‌ಗಳನ್ನು ಕಲಾಸಿಪಾಳ್ಯಂ ಬಸ್ ಸ್ಟ್ಯಾಂಡ್‌ಗೆ ಶಿಫ್ಟ ಮಾಡಬಹುದು. ಆಗ ಟ್ರಾಫಿಕ್ ಸರಳವಾಗುತ್ತದೆ. ಆಮೇಲೆ, ಆಂಬುಲೆನ್ಸ್‌ನಲ್ಲಿ ಡೆಲಿವರಿಯಾದಂಥ ವಿಚಾರ ನನಗೆ ಗೊತ್ತಿಲ್ಲ. ಅದೇನಾದರೂ ಇದ್ದರೆ ತಾವು ಹೇಳಬೇಕು. ಕಲಾಸಿಪಾಳ್ಯಂ ಬಸ್ ಸ್ಟ್ಯಾಂಡ್ ಅನ್ನು ಶಿಫ್ಟ್ ಮಾಡಿದರೆ ಇದಕ್ಕೆ ಸ್ವಲ್ಪ ಅನುಕೂಲವಾಗುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಹೆಚ್.ಎನ್.ನಂಜೇಗೌಡ: ಡೆಲಿವರಿಯಾದದ್ದು ಗೊತ್ತಾದರೆ ನೀವು ಏನು ಕ್ರಮ ಕೈಗೊಳ್ಳುತ್ತೀರಿ?

ಶ್ರೀಮತಿ ಪ್ರಮೀಳ ನೇಸರ್ಗಿ: ಮಾನ್ಯ ಅಧ್ಯಕ್ಷರೇ, ಇದು ನನ್ನ ಕ್ಷೇತ್ರಕ್ಕೆ ಬರತಕ್ಕಂಥಾದ್ದು. ಹೆಲ್ತ್ ಮಿನಿಸ್ಟರ್ ಕೂಡ ಬಂದಿದ್ದರು. ಅವರು ಬಂದು ನೋಡಿದ್ದಾರೆ. ಆ ಆಸ್ಪತ್ರೆಗೆ ಹೋಗುವುದಕ್ಕೆ ಯಾವ ಕಡೆಯೂ ದಾರಿ ಇಲ್ಲ. ಮೂರು ಸಲ ಆರೋಗ್ಯ ಸಚಿವರನ್ನು, ಇಬ್ಬರನ್ನು ಕರೆದುಕೊಂಡು ಹೋಗಿ ಹೀಗೆ ಆಗಿದೆ, ಇದಕ್ಕೇನಾದರೂ ವ್ಯವಸ್ಥೆ ಮಾಡಿ ಎಂದು ಕೇಳಿದರೂ ಇದುವರೆಗೂ ಮಾಡಿಲ್ಲ. ಆದ್ದರಿಂದ ಅಲ್ಲಿ ನೀವು ಏನಾದರೂ ಒಂದು ವ್ಯವಸ್ಥೆ ಮಾಡಿ. ಅಲ್ಲಿ ಒನ್‌ವೇ

ಮಾಡಿದ್ದೀರಿ. ಈ ಕಡೆ ಕಲಾಸಿಪಾಳ್ಯದಿಂದ ಹೋಗಬೇಕಾದರೂ ಕೂಡ ಒನ್‌ವೇ ಮಾಡಿದ್ದೀರಿ. ಬಸ್ಸು, ಕಾರು ಹೀಗೆ ಯಾವ ವೆಹಿಕಲ್ಸ್‌ಅನ್ನೂ ತೆಗೆದುಕೊಂಡು ಹೋಗಲು ಆಗುವುದಿಲ್ಲ. ಈ ಪರಿಸ್ಥಿತಿ ಇದೆ. ಅದಕ್ಕೋಸ್ಕರ ತಾವು ತಕ್ಷಣ ಸೂಕ್ತ ಕ್ರಮ ತೆಗೆದುಕೊಂಡು ಟ್ರಾಫಿಕ್ ಇನ್ಸ್‌ಪೆಕ್ಟರ್‌ಗೆ ಹೇಳಿ ಅಲ್ಲೇನಾದರೂ ವ್ಯವಸ್ಥೆ ಮಾಡುತ್ತೀರಾ ಅಥವಾ ಕಲಾಸಿಪಾಳ್ಯಂನಿಂದ ಬರತಕ್ಕಂಥ ವಾಣಿವಿಲಾಸ್ ಪಕ್ಕದಲ್ಲಿ ಒಂದು ಸೈಡ್ ರೋಡ್ ಇದೆಯಲ್ಲಾ, ಆ ರಸ್ತೆಯಲ್ಲಿ ವೆಹಿಕಲ್‌ಗಳು ಹೋಗದ ಹಾಗೆ ಮಾಡಿ ಜನಗಳು ಹೋಗುವುದಕ್ಕೆ ವ್ಯವಸ್ಥೆ ಮಾಡಿಕೊಡುತ್ತೀರಾ? ಇದು ಮಾಡದೇ ಇದ್ದರೆ, ಅಲ್ಲಿ ಆಸ್ಪತ್ರೆಗಳಿದ್ದೂ ಕೂಡ ಏನೂ ಪ್ರಯೋಜನವಾಗುವುದಿಲ್ಲ. ಒಂದು ಕಡೆ ವಾಣಿವಿಲಾಸ್ ಆಸ್ಪತ್ರೆ, ಮತ್ತೊಂದು ಕಡೆ ವಿಕ್ಟೋರಿಯಾ ಆಸ್ಪತ್ರೆ ಇನ್ನೊಂದು ಕಡೆ ಜಯದೇವ ಆಸ್ಪತ್ರೆ, ಈ ಮೂರು ಕಡೆಗಳಲ್ಲೂ ಹಾರ್ಟ್ ಅಟ್ಯಾಕ್ ಆದ್ದಂಥ ಪೇಷೆಂಟನ್ನು ಅಲ್ಲಿಗೆ ತರುವುದಕ್ಕೆ ಆಗುತ್ತಿಲ್ಲ. ಆದ್ದರಿಂದ ಇದಕ್ಕೆ ತಾವು ಏನಾದರೂ ವ್ಯವಸ್ಥೆ ಮಾಡಬೇಕು. ಇದನ್ನು ಮಾಡುವುದಕ್ಕೆ ಆಗುವುದಕ್ಕೆ ಆಗುವುದಿಲ್ಲ, ಕಲಾಸಿಪಾಳ್ಯಂ ಅನ್ನು ಶಿಫ್ಟ್ ಮಾಡಿ ಎಂದರೆ ಅದು ರಾಜಣ್ಣನವರ ಕೈಯ್ಯಲ್ಲಿ ಇಲ್ಲ. ಸರ್ಕಾರದವರ ಕೈಯ್ಯಲ್ಲಿದೆ. ರಾಜಣ್ಣನವರು, ನಾವು ಹೋಗಿ ಕಲಾಸಿಪಾಳ್ಯಂ ಬಸ್ ಸ್ಟ್ಯಾಂಡ್‌ಅನ್ನು ಶಿಫ್ಟ್ ಮಾಡಿ ಎಂದರೆ ಹೇಳುವುದಕ್ಕಾಗುತ್ತದೆಯೇ? ಕಲಾಸಿಪಾಳ್ಯಂ ಬಸ್ ಸ್ಟ್ಯಾಂಡ್‌ನ್ನು ಎಲ್ಲಿಗೆ ಶಿಫ್ಟ್ ಮಾಡಬೇಕು ಎಂದು ಸರ್ಕಾರ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ. ಈಗಾಗಲೇ ಕಾರ್ಪೋರೇಷನ್ನಿನವರು ಅದನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ತಾವು ಇದರ ಬಗ್ಗೆ ಸೂಕ್ತವಾಗಿ, ಗಂಭೀರವಾಗಿ ಯೋಚನೆ ಮಾಡಿ, ಇದಕ್ಕೇನಾದರೂ ಒಂದು ಪರ್ಯಾಯ ಆಲೋಚನೆ ಮಾಡಿ ಅದಕ್ಕೆ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ಬಹಳ ತೊಂದರೆಯಾಗುತ್ತದೆ ಎನ್ನುವುದನ್ನು ನಾನು ಸನ್ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎನ್.ರಾಜಣ್ಣ: ಮಾನ್ಯ ಅಧ್ಯಕ್ಷರೇ, ಕಲಾಸಿಪಾಳ್ಯಂ ಬಸ್ ಸ್ಟ್ಯಾಂಡ್‌ಅನ್ನು ಶಿಫ್ಟ್ ಮಾಡಬೇಕು ಎನ್ನುವುದು ಬಹಳ ವರ್ಷಗಳಿಂದ ಪೆಂಡಿಂಗ್‌ನಲ್ಲಿದೆ. ಆದರೆ ಇದಕ್ಕೆ ನಮ್ಮ ಅಧಿಕಾರಿಗಳಿಗೆ ವಿಲ್ ಎನ್ನುವುದು ಬೇಕು. ಆ ವಿಲ್, ದಿಲ್ ಬಂದರೆ ಮಾತ್ರ ಇದು ಶಿಫ್ಟ್ ಆಗುತ್ತದೆ. ಅದು ಶಿಫ್ಟ ಆಗುವುದಿಲ್ಲ. ಇದಕ್ಕೆ ಹಿಂದೆಯೇ ಒಂದು ಪ್ಲಾನ್ ಮಾಡಿ, ರಿಂಗ್ ರೋಡ್ ಮಾಡಿ ಹೊರಗಡೆಯಿಂದ ಬಸ್ಸುಗಳಿಗೆ ನಾಲ್ಕು ಕಡೆಗಳಲ್ಲಿ ನಾಲ್ಕು ಬಸ್ ಸ್ಟೇಷನ್‌ಗಳನ್ನು ಮಾಡಬೇಕು ಎಂದು ಇದೆ. ಅದು ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ಆದ್ದರಿಂದ ನಾನು ಹೇಳುತ್ತಿದ್ದೇನೆ, ಸನ್ಮಾನ್ಯ ಸಚಿವರುಗಳಾದ ಬೆಂಗಳೂರು ನಗರದ ಮಂತ್ರಿಗಳು, ಗೃಹ ಮಂತ್ರಿಗಳು ಮತ್ತು ನಾವೆಲ್ಲಾ ಸೇರಿಕೊಂಡರೆ ಇದೇನೂ ದೊಡ್ಡದಲ್ಲ. ಆದರೆ ಅಧಿಕಾರಿಗಳು ವರ್ಷಾನುಗಟ್ಟಲೆ ಇದನ್ನು ಪೆಂಡಿಂಗ್‌ನಲ್ಲಿ ಇಟ್ಟುಕೊಂಡಿದ್ದಾರೆ. ಏತಕ್ಕೋಸ್ಕರ ಇದನ್ನು ಪೆಂಡಿಂಗ್‌ನಲ್ಲಿ ಇಟ್ಟುಕೊಂಡಿದ್ದಾರೆ ಎಂದು ವಿಚಾರ ಮಾಡಿ, ಬೇರೆ ಕಡೆ ಶಿಫ್ಟ್ ಮಾಡಲು ಸಹಕಾರ

ಕೊಡಿ. ಈ ಕಲಾಸಿಪಾಳ್ಯಂ ಬಸ್ ಸ್ಟ್ಯಾಂಡನ್ನು ಬೇರೆ ಕಡೆ ಶಿಫ್ಟ ಮಾಡುವ ವಿಚಾರದಲ್ಲಿ ನಾವು ಯಾವಾಗಲೂ ನಿಮ್ಮ ಜೊತೆ ಇರುತ್ತೇವೆ. ಎರಡನೆಯದು, ಹಿಂದೆ, ಸಿಟಿ ಮಾರ್ಕೆಟ್ ಎದುರುಗಡೆ ವಿಕ್ಟೋರಿಯಾ ಆಸ್ಪತ್ರೆಯ ಮೈನ್ ಗೇಟ್ ಇತ್ತು. ಇದನ್ನು ಕ್ಲೋಸ್ ಮಾಡಲು ಕಾರಣವೆಂದರೆ ವಾಹನಗಳ ಒತ್ತಡ ಜಾಸ್ತಿಯಾಗಿತ್ತು, ಎರಡನೆಯದಾಗಿ, ಅಲ್ಲಿ ಜನಸಂಖ್ಯೆಯ ಒತ್ತಡ ಜಾಸ್ತಿಯಾದ ಮೇಲೆ ಈ ಗೇಟನ್ನು ಹಿಂದುಗಡೆ ಇಡಲು 10 ವರ್ಷಗಳ ಹಿಂದೆ ಮಾಡಿದರು. ವಾಣಿವಿಲಾಸ್ ಆಸ್ಪತ್ರೆ ಎದುರುಗಡೆ ಇದ್ದುದನ್ನು. ಆದರೂ ಅಲ್ಲಿ ಇವತ್ತು ಒಳಗಡೆಗೆ ಹೋಗಲು ಆಗದಿರುವಂಥ ಪರಿಸ್ಥಿತಿ ಬಂದಿದೆ. ಆದ್ದರಿಂದ ಇದಕ್ಕೆ ಏನಾದರೂ ಮಾಡಿ ಸಾರ್ವಜನಿಕರು ಮತ್ತು ವಾಹನಗಳು ಒಳಗಡೆ ಹೋಗುವ ಹಾಗೆ ಮಾಡಿಕೊಡಬೇಕು ಎಂದು ನಾನು ಮನವಿ ಮಾಡುತ್ತಿದ್ದೇನೆ.

ಶ್ರೀ ಪಿ.ಎಸ್.ಪ್ರಕಾಶ್: ಮಾನ್ಯ ಸಭಾಧ್ಯಕ್ಷರೇ, ಕಲಾಸಿಪಾಳ್ಯಂ ಮಾರ್ಕೆಟ್ಟನ್ನು ಕಾರ್ಪೋರೇಷನ್ನಿನವರು 5 ಕೋಟಿ ರೂಪಾಯಿಗೆ ಕೆ.ಎಸ್.ಆರ್.ಟಿ.ಸಿ.ಗೆ ಮಾರಿದ್ದರು. ಅದು ಆದಮೇಲೆ ಕಾರ್ಪೊರೇಷನ್ನಿನವರು ಸಿಟಿ ಬಸ್ ಸ್ಟ್ಯಾಂಡಿನ ಸುತ್ತ ಇರತಕ್ಕಂಥ ಜಾಗವನ್ನು ಕೇಳಿದರು. ಅದರಲ್ಲಿ ಡಿಸ್ಪೂಟ್ ಬಂದು, ಆ ಮಾರಾಟವನ್ನು ನಾವು ವಾಪಸ್ಸು ತೆಗೆದುಕೊಂಡಿದ್ದೇವೆ, ನಾವು ಮಾರುವುದಿಲ್ಲ ಎಂದು ಹೇಳಿ ಅದನ್ನು ವಾಪಸ್ಸು ತೆಗೆದುಕೊಂಡಿದ್ದಾರೆ. ಆದ್ದರಿಂದ ಮಾರ್ಕೆಟ್ ಹತ್ತಿರ ಇಂದ್ರಭವನ ಹೋಟೆಲ್ ಹತ್ತಿರ ಇರತಕ್ಕಂಥ ಬಿ.ಟಿ.ಎಸ್. ಬಸ್‌ಸ್ಟ್ಯಾಂಡನ್ನು ಕಲಾಸಿಪಾಳ್ಯಕ್ಕೆ ಶಿಫ್ಟ ಮಾಡಿ, ಅಲ್ಲಿರತಕ್ಕಂಥ ಕಾರ್ಪೋರೇಷನ್ ಲ್ಯಾಂಡ್ ಅನ್ನು ಕಾರ್ಪೊರೇಷನ್ನಿನವರು ಉಳಿಸಿಕೊಂಡು, ಟೂ ವೀಲರ್ಸ್ ಮತ್ತು ಫೋರ್ ವೀಲರ್ಸ್ ಪಾರ್ಕಿಂಗ್ ಪ್ಲೇಸ್‌ಗೆ ಶಿಫ್ಟ ಮಾಡಿದರೆ, ಜೆ.ಸಿ.ರಸ್ತೆಯಲ್ಲಿ ಯಾವ ರೀತಿ ಪಾರ್ಕಿಂಗ್ ಇಲ್ಲದೆ ಕಾರುಗಳು ಬಹಳ ಸಲೀಸಾಗಿ ಹೋಗುತ್ತಿವೆ, ಅದೇ ರೀತಿ ಮಾರ್ಕೆಟ್, ವಿಕ್ಟೋರಿಯಾ ಆಸ್ಪತ್ರೆ ಮತ್ತು ವಾಣಿ ವಿಲಾಸ್ ಆಸ್ಪತ್ರೆಗಳ ಕಡೆಗಳಲ್ಲೂ ವ್ಯವಸ್ಥೆ ಮಾಡಬಹುದು. ದಯವಿಟ್ಟು ಅವಿನ್ಯೂ ರೋಡ್ ಮತ್ತು ಮಾರ್ಕೆಟ್ಟುಗಳಲ್ಲಿರುವಂಥ ಪಾರ್ಕಿಂಗ್‌ಅನ್ನು ಶಿಫ್ಟ ಮಾಡಬೇಕು. ಅದು ಮಾಡಿದಾಗ ಮಾತ್ರ ಸಾಕಷ್ಟು ಸುಧಾರಣೆಯಾಗಲು ಸಾಧ್ಯವಾಗುತ್ತದೆ.

ಶ್ರೀ ಆರ್.ರೋಷನ್‌ಬೇಗ್: ಮಾನ್ಯ ಸಭಾಧ್ಯಕ್ಷರೇ, ನಾನು ರಾಜಣ್ಣನವರಿಗೆ ಕಲಾಸಿಪಾಳ್ಯಂ ಬಸ್ ಸ್ಟ್ಯಾಂಡ್ ಮಾಡಿಸಿ ಎಂದು ಹೇಳಿದ್ದು ಅವರು ಅವರ ಇನ್‌ಫ್ಲೂಯೆನ್ಸ್ ಅನ್ನು ಉಪಯೋಗಿಸಿ ಎಂದಷ್ಟೇ ಹೇಳಿದ್ದು. ಸರ್ಕಾರಕ್ಕೆ ಏನು ಮಾಡಬೇಕು ಎನ್ನುವ ಬಗ್ಗೆ ದಿಲ್ ಇದೆ, ವಿಲ್ ಸಹಾ ಇದೆ. but it is a fact that it is a conjested place. The Government is aware that ಅಲ್ಲಿ ಜಯದೇವ ಆಸ್ಪತ್ರೆ ಇದೆ, ವಿಕ್ಟೋರಿಯಾ ಆಸ್ಪತ್ರೆ ಇದೆ, ವಾಣಿ ವಿಲಾಸ್ ಆಸ್ಪತ್ರೆ ಇದೆ. ಅಲ್ಲಿ ಸುತ್ತಮುತ್ತ ರೋಗಿಗಳನ್ನು ಕರೆದುಕೊಂಡು ಬರಲು ಕಷ್ಟವಾಗುತ್ತಿದೆ, ನಿಜ. ಮಾನ್ಯ ಪ್ರಕಾಶ್‌ರವರು ಹೇಳಿದ ಹಾಗೆ ಪಾರ್ಕಿಂಗ್ ಅನ್ನು ಶಿಫ್ಟ್ ಮಾಡಲು ಹೊಸ

ಯೋಜನೆಯೊಂದನ್ನು ಮಾಡಿ ಬೆಂಗಳೂರಿನಲ್ಲಿ ಮಲ್ಟಿ ಸ್ಟೋರೀಡ್ ಪಾರ್ಕಿಂಗ್ ಕಾಂಪ್ಲೆಕ್ಸ್‌ಗಳನ್ನೇನಾದರೂ ನಾವು ಕಟ್ಟಿದರೆ ಆಗ ವೆಹಿಕಲ್ ಕನ್‌ಜೆಷನ್ ಸಹಾ ಸ್ವಲ್ಪ ಕಡಿಮೆಯಾಗುತ್ತದೆ. There is a proposal before the Goverment that ಅವಿನ್ಯೂ ರೋಡಿನಲ್ಲಿ ಕೂಡ ನಾವು ವೆಹಿಕ್ಯುಲರ್ ಟ್ರಾಫಿಕ್ ಅನ್ನು ಬ್ಯಾನ್ ಮಾಡಬೇಕು ಎಂದು ಇದ್ದೇವೆ. ಅವಿನ್ಯೂ ರೋಡಿನಲ್ಲಿ ಟು ವೀಲರ್ಸ್, ಫೋರ್ ವೀಲರ್ಸ್ ಯಾವುದೂ ಹೋಗಬಾರದು ಎಂದು ಬ್ಯಾನ್ ಮಾಡಬೇಕು ಎಂದು ಇದ್ದೇವೆ. ಶ್ರೀಮತಿ ಪ್ರಮೀಳ ನೇಸರ್ಗಿಯವರು, ಅಲ್ಲಿ ಸುತ್ತಮುತ್ತ ಹಳೆಯ ಗೇಟನ್ನು ಕ್ಲೋಸ್ ಮಾಡಿದ್ದಾರೆ, ಇದರಿಂದ ಕಷ್ಟವಾಗುತ್ತಿದೆ ಎಂದು ಹೇಳಿದರು. ಅದು ನಿಜ, ಅಲ್ಲಿ ಕಷ್ಟವಾಗುತ್ತಿದೆ. ನಾನು ಮತ್ತು ಬೆಂಗಳೂರು ನಗರಾಭಿವೃದ್ಧಿ ಮಂತ್ರಿಗಳಾದಂಥ ಅನಂತನಾಗ್‌ರವರು, ಪ್ರಮೀಳ ನೇಸರ್ಗಿಯವರು, ಪ್ರಕಾಶ್‌ರವರು, ಮತ್ತು ರಾಜಣ್ಣನವರು ಎಲ್ಲರೂ ಈ ಅಧಿವೇಶನ ಆದಮೇಲೆ ಇನ್ನೊಂದು ಸಲ ನಾವು ಕುಳಿತುಕೊಂಡು, ಇನ್ನೊಂದು ಕಡೆ ನಾವು ಏಕೆ ಗೇಟ್ ಓಪನ್ ಮಾಡಬಾರದು ಎನ್ನುವ ಬಗ್ಗೆ ಟ್ರಾಫಿಕ್ ಪೊಲೀಸಿನವರ ಜೊತೆ ಒಂದು ಮೀಟಿಂಗ್ ಮಾಡುತ್ತೇನೆ ಎನ್ನುವ ಭರವಸೆಯನ್ನು ಕೊಡುತ್ತೇನೆ.

ವಿಷಯ: ವರ್ಗಾವಣೆಗಳಿಂದ ಕೆ.ಇ.ಬಿಗೆ ತಗುಲಿದ ಒಟ್ಟು ವೆಚ್ಚ.

537 (3360)

ಶ್ರೀ ಹೆಚ್.ಶಿವಪ್ಪ (ಹರಿಹರ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಈ ಸಾಲಿನಲ್ಲಿ ವರ್ಗಾವಣೆಗೊಂಡ ಅಧಿಕಾರಿಗಳು ಮತ್ತು ನೌಕರರುಗಳಿಗೆ ನೀಡಿರುವ ಪ್ರಯಾಣ ಭತ್ಯೆ ಮತ್ತು ದಿನಭತ್ಯೆಗಳಿಂದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಆಗಿರುವ ಒಟ್ಟು ವೆಚ್ಚ ಎಷ್ಟು?

ಶ್ರೀ ಶರಣಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು):

1) ಈ ಸಾಲಿನಲ್ಲಿ ವರ್ಗಾವಣೆಗೊಂಡ ಅಧಿಕಾರಿಗಳು ಮತ್ತು ನೌಕರರುಗಳಿಗೆ ನೀಡಿರುವ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆಗಳಿಂದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಆಗಿರುವ ಒಟ್ಟು ವೆಚ್ಚ ರೂ. 34,48,821-00.

ಶ್ರೀ ಹೆಚ್.ಶಿವಪ್ಪ: ಮಾನ್ಯ ಅಧ್ಯಕ್ಷರೆ, ಈ ಸಾಲಿನಲ್ಲಿ ವರ್ಗಾವಣೆಗೊಂಡ ಅಧಿಕಾರಿಗಳು ಮತ್ತು ನೌಕರರುಗಳಿಗೆ ನೀಡಿರುವ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆಗಳಿಂದ ಕರ್ನಾಟಕ ವಿದುಚ್ಛಕ್ತಿ ಮಂಡಳಿಗೆ ಆಗಿರುವ ಒಟ್ಟು ವೆಚ್ಚ ರೂ. 34,48,821 ಎಂದು ಹೇಳಿದ್ದಾರೆ. ನಾನು ಸಬ್ಸಿಡಿಯರಿ ಪ್ರಶ್ನೆಗಳನ್ನೂ ಸಹ ಹಾಕಿದ್ದೆ. ಆದರೆ ಬರೀ